ಹಣ, ಅಂತಸ್ತುಗಳೇ ಮಾನದಂಡವಾಗುವ ರೀತಿ ಅಪ್ರತಿಭರನ್ನಾಗಿಸುತ್ತದೆ. ಸುತ್ತಲಿನ ಪರಿಸರದಲ್ಲಿ ಈ ಬಗೆಯ ಸಂಕುಚಿತ ಧೋರಣೆಯಿದ್ದರೂ, ಅನುಪಮಾಳ ವ್ಯಕ್ತಿತ್ವ ಉನ್ನತಿಗೇರುತ್ತದೆ. ತನ್ನ ಪರಿಸರದ ಪ್ರಭಾವದಿಂದ ಹೊರಬಂದು ಸ್ವತಂತ್ರ ಜೀವನ ಕಟ್ಟಿಕೊಳ್ಳುವ ಸ್ವಾಭಿಮಾನಿ, ಛಲಗಾತಿಯಾಗಿ ಆಕೆ ಗಮನಸೆಳೆಯುತ್ತಾಳೆ.

ಸದಾ ವಿಷಕಕ್ಕುವ ಮಲತಾಯಿ, ಶ್ರೀಮಂತಿಕೆಯ ಗರ್ವದಿಂದ ಮೆರೆಯುವ ಅತ್ತೆ, ಹಾದಿತಪ್ಪಿದ್ದರೂ ನಿರ್ಭೀತಿಯಿಂದ ಸುಳ್ಳು ಹೇಳಿ ಪಾರಾಗುವ ನಾದಿನಿಯ ಮಧ್ಯೆಯೂ ತನ್ನತನವನ್ನು ಬಿಟ್ಟುಕೊಡದೆ ಸಹನೆಯಿಂದ ಗಂಡನ ಪ್ರೇಮದ ಮೇಲೆ ನಂಬಿಕೆಯಿಟ್ಟು ಕಾಯುತ್ತಾಳೆ. ಸಾವು ದೂರ ಮಾಡುವ ತನಕ ಜೊತೆಯಿರುತ್ತೇನೆಂದು ಪ್ರಮಾಣ ಮಾಡಿದಾತ, ಮುಂದೊದಗುವ ಕುರೂಪಕ್ಕೆ ಹೆದರಿ ಹೆಂಡತಿಯ ಪತ್ರಕ್ಕೆ ಉತ್ತರ ಕೂಡ ಬರೆಯದೆ ತಣ್ಣನೆ ಕ್ರೌರ್ಯ ಮೆರೆಯುತ್ತಾನೆ. ವ್ರತ, ಪೂಜೆ, ಹಬ್ಬದ ಆಡಂಬರದಲ್ಲಿಯೇ ಮುಳುಗಿ ಬಿಳುಪು ಬಂದ ಹುಡುಗಿ ಮಡಿಗೆ ಬರುವುದಿಲ್ಲವೆಂದು ಅತ್ತೆಮನೆಯಿಂದ ಅಟ್ಟುವಾಗ, ಮುಚ್ಚಿಟ್ಟು ಮೋಸ ಮಾಡಿದರೆಂದು ಅಪಪ್ರಚಾರ ನಡೆಸುವಾಗ, ಹಣ, ಅವಕಾಶ, ಪರಿಸ್ಥಿತಿ ಯಾವೊಂದು ಅಂಶವೂ ತನ್ನ ಕಡೆಗೆ ಇರದಿರುವಾಗಲೂ ಸಣ್ಣತನಕ್ಕೆ ಪಕ್ಕಾಗದೆ , ವಿಧಿಯನ್ನು ಹಳಿಯುತ್ತಾ ಕೈಕಟ್ಟಿ ಕೂರದೆ ಮುಂದಡಿಯಿಡುತ್ತಾಳೆ.

ವೈದ್ಯರ ಮಾತನ್ನು ಚಾಚೂತಪ್ಪದೆ ಪಾಲಿಸಿಯೂ ಗುಣ ಕಾಣದಿರುವಾಗ, ಬೆಟ್ಟದ ಮೇಲಿನ ದೇವರಿಗೆ ಶ್ರದ್ಧೆಯಿಂದ ನಡೆದುಕೊಳ್ಳುವ ಅನುಪಮಾಗೆ ಅಲ್ಲಿಯೂ ಪರಿಹಾರ ದೊರೆಯುವುದಿಲ್ಲ. ಸೋತುಹೋದ ಮನಃಸ್ಥಿತಿಯಲ್ಲಿ ಸಾಯಬೇಕೆಂದು ಹೊರಟ ಘಳಿಗೆಯಲ್ಲಿ ಆ ದೇವಾಲಯದ ಕೋಡುಗಲ್ಲಿನ ಮೇಲೆ ನಿಂತು ಯೋಚಿಸುವ ಧಾಟಿ, ತೆಗೆದುಕೊಳ್ಳುವ ನಿರ್ಧಾರ ಆಕೆಯ ಅಂತಃಸತ್ವದ ಗಟ್ಟಿತನಕ್ಕೊಂದು ನಿದರ್ಶನ. ಹಾದಿತಪ್ಪಿದವರು, ತಪ್ಪು ಮಾಡಿದವರು, ವಂಚಕರೇ ನಿರ್ಭೀತಿಯಿಂದ, ಹೆಮ್ಮೆಯಿಂದ ಜೀವನ ಸಾಗಿಸುತ್ತಿರುವಾಗ ಯಾವ ತಪ್ಪೂ ಮಾಡದ ತಾನೇಕೆ ಜೀವನದಿಂದ ವಿಮುಖಳಾಗಬೇಕು? ತನಗೆ ಬೆಲೆಯಿಲ್ಲದ ಕಡೆ ಜೀವ ತೆರುವುದಕ್ಕಿಂತ ಅವರಿಂದ ದೂರವಾಗಿ ಸ್ವತಂತ್ರವಾಗಿ ಬದುಕು ಕಟ್ಟಿಕೊಳ್ಳಬಾರದೇಕೆ? ಅದೃಷ್ಟವಿದ್ದರೆ ಆಡಿಕೊಂಡವರ ಕಣ್ಣುಕುಕ್ಕುವ ಎತ್ತರಕ್ಕೇರಬಹುದಲ್ಲವೆ? ಬದುಕಿನ ಪರೀಕ್ಷೆಗಳೇನೇ ಇರಲಿ. ಎದುರಿಸುವ ಧೈರ್ಯವನ್ನು ದಯಪಾಲಿಸು ದೇವಿ ಎನ್ನುತ್ತಾ ಅದುವರೆಗಿನ ವಿಷಮ ಘಳಿಗೆಗಳ ನೆನಪುಗಳನ್ನು ಅಲ್ಲಿಯೇ ತೂರಿ ಹೊಸ ಊರಿಗೆ ಹೊಸ ಜನರೆಡೆಗೆ ನಡೆಯುತ್ತಾಳೆ. ಹಳ್ಳಿಯ ಬದುಕಿನ ನೆಮ್ಮದಿಯ ಬಗ್ಗೆ ಕರುಬುವ ನಗರವಾಸಿಗಳಿಗೆ, ಇಲ್ಲಿ ಮಹಾನಗರದ ಅನಾಮಿಕತೆಯಲ್ಲಿ, ಕಾಯಕವೇ ಕೈಲಾಸವೆನಿಸುವ ಪರಿಸರದಲ್ಲಿ ಪರಿತ್ಯಕ್ತರಿಗೆ ಸಿಗುವ ಸಾಂತ್ವನದ ಪರಿಚಯವಾಗುತ್ತದೆ. ಅಷ್ಟಕ್ಕೂ ನೆಮ್ಮದಿಯೆಂಬುದು ಸಾಪೇಕ್ಷ. ಒಬ್ಬೊಬ್ಬರ ನೆಮ್ಮದಿಯ ನೆಲೆಯ ಕಲ್ಪನೆಯೂ ಭಿನ್ನ.

ಮುಂದೆ ವಿದ್ಯೆಯ ಬಲದಿಂದ ಗೌರವಯುತ ಸ್ಥಾನಕ್ಕೇರಿ, ತನ್ನದೇ ಆಪ್ತ ಪ್ರಪಂಚವೊಂದನ್ನು ಸೃಷ್ಟಿಸಿಕೊಳ್ಳುವ ಸ್ವಾಭಿಮಾನಿ ಯುವತಿಯಾಗಿ ಆಕೆ ಆದರ್ಶವೆನಿಸುತ್ತಾಳೆ. ಒಮ್ಮೆ ಕಡಿದ ದಾಂಪತ್ಯದ ತಂತುವನ್ನು ಮತ್ತೆಲ್ಲೋ ಹುಡುಕದ, ತಾನಾಗಿಯೇ ತೊಡರಿಕೊಂಡ ಬಂಧವನ್ನೂ ಸ್ನೇಹವಾಗಿಯೇ ಉಳಿಸಿಕೊಳ್ಳಲು ಆಶಿಸುವ ಪ್ರಬುದ್ಧೆಯಾಕೆ. ಕರ್ತವ್ಯಪ್ರಜ್ಞೆಯಿಂದ ಮನೆಗೆ ಹಣ ಕಳಿಸುವ, ಮಲತಾಯಿಯ ಸಣ್ಣಬುದ್ಧಿಯ ಬಗೆಗೂ ನಿರ್ಲಿಪ್ತವಾಗಿರುವ, ಲೋಕಾಪವಾದಕ್ಕೆ ಹೆದರದ ಸ್ನೇಹಿತರ ಕಷ್ಟಗಳಿಗೆ ಹೆಗಲಾಗುವ, ಗಂಡು-ಹೆಣ್ಣಿನ ಮಧ್ಯೆ ನಿಷ್ಕಲ್ಮಶ ಸ್ನೇಹವೂ ಸಾಧ್ಯವೆನ್ನುವ ಅನುಪಮಾ ಸರಳವಾಗಿ ಬದುಕುತ್ತಲೇ ಮೌಢ್ಯಗಳನ್ನು ಒಡೆಯುತ್ತಾಳೆ. ಕ್ಷಮೆಗೆ ಅರ್ಹರಲ್ಲದವರನ್ನು ಕ್ಷಮಿಸಲಾರೆನೆನ್ನುವ ನಿಲುವು ಅವಳದು. ಸ್ವತಂತ್ರ ಜೀವನ ಕಟ್ಟಿಕೊಂಡ ಮೇಲೆ ಬರುವ ಗಂಡನನ್ನು ತಿರಸ್ಕರಿಸುವ ನಡೆ, ತನಗೆ ಸಂತೋಷ ನೀಡುವ ಸಂಸ್ಕೃತ ನಾಟಕಗಳ ಸಹವಾಸದಲ್ಲಿ ಮಗ್ನಳಾಗುವ ತನ್ಮಯತೆ, ಜೀವನದ ಅನಿಶ್ಚಿತತೆಯ ಬಗ್ಗೆ ಅಧೀರಳಾಗದೆ ವರ್ತಮಾನದಲ್ಲಿ ನೆಮ್ಮದಿಯಿಂದ ಬದುಕಬೇಕೆನ್ನುವ ಆದರ್ಶವನ್ನು ಅನುಸರಿಸಿ ಆಕೆ ಜೀವನ ನಡೆಸುತ್ತಾಳೆ.

ಅನುವಂಶಿಕವಾಗಿ ಬರುವ ಡಯಾಬಿಟಿಸ್ ಬಗ್ಗೆ ಯೋಚಿಸದ ಸಮಾಜ, ಎಲ್ಲರ ಕಣ್ಣಿಗೆ ಕಾಣುವ ಅನುವಂಶಿಕವೆಂದು ಸಾಬೀತಾಗದ ಬಿಳುಪಿನ ಬಗ್ಗೆ